ಪ್ರಶ್ನೆ

1) ಸೂಳ್ಯ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟ ಹಾಗೂ ಮಂಜೂರಾದ ಸ್ಥಳದಲ್ಲಿ ಇತರೆ ವರ್ಗದವರು ಬಲಾತ್ಕಾರವಾಗಿ ಸ್ವಾಧೀನಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಈ ನಿಟ್ಟಿನಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ?

2) ಸೂಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ ಪಂಗಡಕ್ಕೆ ಯಾವ ಯಾವ ಗ್ರಾಮದ ಯಾವ ಸರ್ವೆ ನಂ.ನಲ್ಲಿ ಸ್ಥಳವನ್ನು ಕಾದಿರಿಸಲಾಗಿದೆ? ಗ್ರಾಮವಾರು ವಿವರ ನೀಡುವುದು?

3) ಸೂಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಯಾವ ಯಾವ ಗ್ರಾಮದಲ್ಲಿ ಯಾವ ಯಾವ ಸರ್ವೆ ನಂ.ನಲ್ಲಿ ಎಷ್ಟು ಸ್ಥಳವನ್ನು ರುದ್ರ ಭೂಮಿಗಾಗಿ ಖರೀದಿಸಲಾಗಿದೆ? (ಗ್ರಾಮವಾರು ವಿವರ ನೀಡುವುದು)

1) ಇಲ್ಲ.

2)

ಗ್ರಾಮ	ಸ.ನಂ.
ಮಂಡೆಕೋಲು	375:1ಎ:1ಎ
ಅರಂತೋಡು	23:2(ಪಿ)
ಮರ್ಕಂಜ	16:1(ಪೈ)
	298:1ಎ1
ಪಂಚಿತ್ತಾಡಿ	173:1(ಎ)
ಅಲೆಟ್ಟಿ	366:1ಎ1ಎ

3) ಇಲ್ಲ.

ದಕ್ಷಿಣ ಕನ್ನಡಜಿಲ್ಲೆಯ ಕಾರ್ಮಿಕರಿಗೆ ವಿವಿಧ ಸವಲತ್ತುಗಳನ್ನು ನೀಡುವುದು.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ : 666(626)

ಸದಸ್ಯರ ಹೆಸರು : ಶ್ರೀ ಅಂಗಾರ ಎಸ್.(ಸೂಳ್ಯ)

ಉತ್ತರಿಸುವ ಸಚಿವರು : ಶ್ರೀ ಎ.ಎಂ.ಹಿಂಡಸಗೇರಿ(ಕಾರ್ಮಿಕ ಮತ್ತು ವಕ್ಫ್ ಸಚಿವರು)

ಪ್ರಶ್ನೆ

ಅ. ಕಾರ್ಮಿಕ ಇಲಾಖೆಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಜನ ಕಾರ್ಮಿಕರಿದ್ದಾರೆ? ಯಾವ ಯಾವ ವರ್ಗದ ಕಾರ್ಮಿಕರಿದ್ದಾರೆ? ತಾಲ್ಲೂಕುವಾರು ಮಾಹಿತಿ ನೀಡುವುದು?

ಆ. ಕಾರ್ಮಿಕರಿಗೆ ಯಾವ ಯಾವ ಯೋಜನೆಯಡಿಯಲ್ಲಿ ಯಾವ ಯಾವ ರೀತಿ ಸೌಲಭ್ಯ ನೀಡಲಾಗಿದೆ? ತಾಲ್ಲೂಕುವಾರು ವಿವರ ನೀಡುವುದು?

ಇ. ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಜನ ಬೀಡಿ ಕಾರ್ಮಿಕರಿದ್ದಾರೆ? ಇವರಿಗೆ ಯಾವ ಯಾವ ಸವಲತ್ತು ನೀಡಲಾಗಿದೆ? (ಗ್ರಾಮವಾರು ವಿವರ ನೀಡುವುದು)

ಉತ್ತರ

ಅ. ಕಾರ್ಮಿಕ ಇಲಾಖಾವತಿಯಿಂದ ಯಾವುದೇ ಸಮೀಕ್ಷೆ ಮಾಡಿಲ್ಲ. ಆದರೆ 1991ರ ಸೆನ್ಸಸ್ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಕಾರ್ಮಿಕರ ಸಂಖ್ಯೆ 1183515 ವಿವರ ಈ ಕೆಳಕಂಡಂತೆ ಇರುತ್ತದೆ.

	ಸಂಘಟಿತ ವಲಯ	ಅಸಂಘಟಿತ ವಲಯ
ಪುರುಷರು	71134	536611
ಮಹಿಳೆಯರು	168791	406979
ಒಟ್ಟು	239925	943590

ಒಟ್ಟು 11,83,515

ಮೇಲಿನ ಕಾರ್ಮಿಕರಲ್ಲಿ ಬೀಡಿ, ಹೆಂಚು, ಇಟ್ಟಿಗೆ, ಮೀನು ಸಂಸ್ಕರಣೆ, ಸಾರಿಗೆ ಸಂಸ್ಥೆ, ಗೇರು ಸಂಸ್ಕರಣಾ, ನರ್ಸಿಂಗ್ ಹೋಂಗಳು, ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು, ತೋಟಗಾರಿಕೆ, ಕೃಷಿ ಕ್ಷೇತ್ರ, ಮುದ್ರಣ ಹಾಗೂ ಕಾರ್ಖಾನೆ ಮತ್ತು ಇತ್ಯಾದಿ ವರ್ಗಗಳ ಕಾರ್ಮಿಕರು ಇರುತ್ತಾರೆ.

ಆ. ಈ ಕಾರ್ಮಿಕರಿಗೆ ಸಂಬಂಧಿಸಿದಂತೆ, ಕಾರ್ಮಿಕ ಇಲಾಖೆಯವತಿಯಿಂದ ಯಾವುದೇ ನಿರ್ದಿಷ್ಟ ಯೋಜನೆಗಳು ಇರುವುದಿಲ್ಲ

ಆದಾಗ್ಯೂ, ವಿವಿಧ ಕಾರ್ಮಿಕ ಕಾಯಿದೆಗಳನ್ನು ಅನುಷ್ಠಾನಗೊಳಿಸುತ್ತಿರುವುದರ ಮೂಲಕ, ಕಾರ್ಮಿಕರಿಗೆ ಕನಿಷ್ಠ ವೇತನ, ಸಮಾನವೇತನ, ಬೋನಸ್, ಪ್ರಸೂತಿ ಸೌಲಭ್ಯ, ಉಪಧನ ಸೌಲಭ್ಯಗಳನ್ನು ದೊರಕಿಸಿಕೊಡಲಾಗುತ್ತಿದೆ.

ಇ. ಸುಳ್ಯ ತಾಲ್ಲೂಕಿನಲ್ಲಿ ಬೀಡಿ ಕಾರ್ಮಿಕರ ಸಮೀಕ್ಷೆ ನಡೆಸಿರುವುದಿಲ್ಲ. ಆದರೂ, ಬೀಡಿ ಮತ್ತು ಸಿಗಾರ್ ಕಾಯ್ದೆಯಲ್ಲಿ ನೀಡಿರುವ ನೋಂದಣಿ ಮತ್ತು ಲೈಸೆನ್ಸ್ ಅಧಾರದ ಮೇರೆಗೆ ಸುಳ್ಯ ತಾಲ್ಲೂಕಿನಲ್ಲಿ ಒಟ್ಟು 3039 ಕಾರ್ಮಿಕರು ಇರುತ್ತಾರೆ ಈ ಕಾರ್ಮಿಕರಿಗೆ ಕಾನೂನುಬದ್ಧ ಸೌಲಭ್ಯಗಳಾದ ಕನಿಷ್ಟ ವೇತನ, ಬೋನಸ್, ವೇತನ ಸಹಿತ ರಜೆ, ಹೆರಿಗೆ ಭತ್ಯೆ, ಉಪಧನ, ರಾಷ್ಟ್ರೀಯ ಮತ್ತು ಹಬ್ಬದ ರಜೆ ಸೌಲಭ್ಯ, ವೈದ್ಯಕೀಯ ಸೌಲಭ್ಯ ಇತ್ಯಾದಿಗಳನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಗ್ರಾಮವಾರು ವಿವರಗಳನ್ನು ಲಗತ್ತಿಸಿದೆ. (ಅನುಬಂಧ-1)

ಸುಳ್ಯ ತಾಲ್ಲೂಕಿನಲ್ಲಿ ನಬಾರ್ಡ್ ಯೋಜನೆಯಡಿ ರಸ್ತೆಗಳಿಗೆ ಡಾಂಬರೀಕರಣ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ : 6,7(905)

ಸದಸ್ಯರ ಹೆಸರು : ಶ್ರೀ ಅಂಗಾರ ಎಸ್.(ಸುಳ್ಯ)

ಉತ್ತರಿಸುವ ಸಚಿವರು : ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು)

ಪ್ರಶ್ನೆ

1. ಸುಳ್ಯ ತಾಲ್ಲೂಕಿನ ಎಲಮಲೆ-ಅರಂತೋಡು ಹಾಗೂ ದೊಡ್ಡ ತೋಟ-ಕುಕ್ಕಜಡ್ಕ ಪಾಜಪಳ್ಳ ರಸ್ತೆ ಡಾಂಬರೀಕರಣಕ್ಕಾಗಿ ನಬಾರ್ಡ್ ಯೋಜನೆಯಲ್ಲಿ ಮಂಜೂರಾಗಿದ್ದು, ಗುತ್ತಿಗೆಯನ್ನು ಕರೆದು ಕಾಮಗಾರಿಯನ್ನು ಪ್ರಾರಂಭ ಮಾಡದೆ ಇರುವುದರಿಂದ ಅಂದಾಜು ವೆಚ್ಚ ಹೆಚ್ಚಾಗಿರುವುದು ನಿಜವೇ? ಇದಕ್ಕೆ ಕಾರಣವೇನು?

2. ಈ ಕಾಮಗಾರಿಯನ್ನು ಪುನಃ ನಬಾರ್ಡ್ ವತಿಯಿಂದ ಕೈಗೆತ್ತಿಕೊಳ್ಳಲಾಗುವುದೇ? ಹಾಗಿದ್ದಲ್ಲಿ ಯಾವಾಗ ಕೈಗೆತ್ತಿಕೊಳ್ಳಲಾಗುವುದು?